ಓಎಸ್ ನಂಃ 16/2022
ಪಿಡಬ್ಲೂಃ 2

**<u>ಸಾಕ್ಷಿಗೆ ದಿನಾಂಕ 06-01-2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಖ್ಯ ವಿಚಾರಣೆ ವಾದಿ ಪರ ಶ್ರೀ ವ್ಹಿ.ಎನ್.ಎಂ. ವಕೀಲರಿಂದ</u>**

ನಾನು ನನ್ನ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯ ಮತ್ತು ನಿಜ ಇರುತ್ತದೆ ಆದ್ದರಿಂದ ಸದರಿ ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಸಾಕ್ಷಿಯು ಈ ಮೊದಲು ಇದ್ದ ಬ್ಯಾಂಕಿನ ಶಾಖಾ ವ್ಯವಸ್ಥಾಪಕರು ನೀಡಿದ ಸಾಕ್ಷ್ಯವನ್ನು ನೋಡಿ ಅವರ ಸಾಕ್ಷ್ಯಕ್ಕೆ ಅಳವಡಿಸಿಕೊಳ್ಳುತ್ತಾರೆ.

ಪ್ರತಿವಾದಿ ಫರ್ಮ ನಮ್ಮ ಬ್ಯಾಂಕಿನಲ್ಲಿ ಸಾಲದ ಖಾತೆ ತೆಗೆಯುವಾಗ ನೀಡಿದ ಮಾದರಿ ಸಹಿಗಳನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ-1 ಎಂದು, ಪ್ರತಿವಾದಿ ಫರ್ಮನ ಸಾಲ ಪಡೆಯಲು ನೀಡಿದ ಅರ್ಜಿಯನ್ನು ನಿಶಾನೆ ಪಿ-2 ಎಂದು, ಸದರಿ ಸಾಲದ ನವೀಕರಣಕ್ಕಾಗಿ ನೀಡಿದ ಪತ್ರವನ್ನು ನಿಶಾನೆ ಪಿ-3 ಎಂದು, ಓವರಡ್ರಾಫ್ಟ್ ಸೌಲಭ್ಯ ಪಡೆಯಲು ನೀಡಿದ ಅರ್ಜಿಯನ್ನು ನಿಶಾನೆ ಪಿ-4 ಎಂದು, ಕ್ಯಾಶ ಕ್ರೆಡಿಟ್ ಅಗ್ರಿಮೆಂಟ್ ನ್ನು ನಿಶಾನೆ ಪಿ-5 ಎಂದು, ಪ್ರತಿವಾದಿ ಫರ್ಮನವರು ನಮಗೆ ನೀಡಿದ ಹೈಪಾಥಿಕೇಷನ್ ಲೆಟರನ್ನು ನಿಶಾನೆ ಪಿ-6 ಎಂದು, ಪ್ರನೋಟ್ ನಿಶಾನೆ ಪಿ-7 ಎಂದು, ಲೆಟರ್ ಆಫ್ ಅಂಡರಟೇಕಿಂಗ್ ನಿಶಾನೆ ಪಿ-8 ಎಂದು, ವಾದಿ ಬ್ಯಾಂಕನವರು ಪ್ರತಿವಾದಿಗೆ ನೀಡಿದ ಲೀಗಲ್ ನೋಟಿಸನ ಕಛೇರಿ ಪ್ರತಿಯನ್ನು ನಿಶಾನೆ ಪಿ-9 ಎಂದು, ಸದರಿ ನೋಟಿಸ್ ಕಳುಹಿಸಿದ ಬಗ್ಗೆ ನೀಡಿದ ಅಂಚೆ ರಸೀದಿಯನ್ನು ನಿಶಾನೆ ಪಿ-10 ಎಂದು, ಪ್ರತಿವಾದಿ ಫರ್ಮಗೆ ಬ್ಯಾಂಕನವರು ನೀಡಿದ ಮತ್ತೊಂದು ಲೀಗಲ್ ನೋಟಿಸನ ಕಛೇರಿ ಪ್ರತಿಯನ್ನು ನಿಶಾನೆ ಪಿ-11 ಎಂದು, ಸದರಿ ನೋಟಿಸನ ಅಂಚೆ ರಸೀದಿಯನ್ನು ನಿಶಾನೆ ಪಿ-12 ಎಂದು, ಪ್ರತಿವಾದಿಗೆ ಕಳುಹಿಸಿದ ಲೀಗಲ್ ನೋಟಿಸ್ ಜಾರಿಯಾಗದೇ ಹಿಂತಿರುಗಿ ಬಂದ ನಾಲ್ಕು ಅಂಚೆ ಲಕೋಟೆಗಳನ್ನು ಕ್ರಮವಾಗಿ ನಿಶಾನೆ ಪಿ-13 ರಿಂದ ಪಿ-16 ಎಂದು, ಸದರಿ ನಿಶಾನೆ ಪಿ-13 ರಿಂದ ಪಿ-16ನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ಅದರ ಒಳಗಿದ್ದ ನೋಟಿಸನ ಪ್ರತಿಗಳನ್ನು ನಿಶಾನೆ ಪಿ-13(ಎ) ರಿಂದ ಪಿ-16(ಎ) ಎಂದು ಗುರುತಿಸಲಾಯಿತು. ವಕೀಲರ ಮುಖಾಂತರ ಪ್ರತಿವಾದಿಯರಿಗೆ ಕಳುಹಿಸಿದ ಲೀಗಲ್ ನೋಟಿಸಗಳ ಕಛೇರಿ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಶಾನೆ ಪಿ-17 ಮತ್ತು ಪಿ-18 ಎಂದು, ಸದರಿ ಲೀಗಲ್

ನೋಟಿಸನ ಅಂಚೆ ರಸೀದಿಗಳನ್ನು ನಿಶಾನೆ ಪಿ-19 ಮತ್ತು ಪಿ-20 ಎಂದು, ವಕೀಲರ ಮುಖಾಂತರ ಕಳುಹಿಸಿದ ಲೀಗಲ್ ನೋಟಿಸನ ಅಂಚೆ ಲಕೋಟೆಗಳು ಜಾರಿಯಾಗದೆ ಹಿಂತಿರುಗಿ ಬಂದಿದ್ದು, ಅವುಗಳನ್ನು ಕ್ರಮವಾಗಿ ನಿಶಾನೆ ಪಿ-21 ಮತ್ತು ಪಿ-22 ಎಂದು, ಸದರಿ ಅಂಚೆ ಲಕೋಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರಲ್ಲಿದ್ದ ನೋಟಿಸನ ಪ್ರತಿಗಳನ್ನು ಕ್ರಮವಾಗಿ ನಿಶಾನೆ ಪಿ-21(ಎ) ಮತ್ತು ಪಿ-22(ಎ) ಎಂದು ಗುರುತಿಸಾಯಿತು. ಪ್ರತಿವಾದಿಯ ಅಕೌಂಟ್ ಸ್ಟೇಟಮೆಂಟನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ-23 ಎಂದು ಗುರುತಿಸಲಾಯಿತು.

(ಪ್ರತಿವಾದಿಯರು ಏಕತರ್ಫಿಯಾದ ಕಾರಣ, ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.